# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 706/2017**

ಸಿ.ಡಬ್ಲೂ-2 ಪಿ.ಡಬ್ಲೂ -2

ದಿಃ **14.08.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಂಜೇಗೌಡ |
| ಗಂಡ/ತಂದೆಯ ಹೆಸರು | ಜವರೇಗೌಡ |
| ವಯಸ್ಸು | ಸುಮಾರು **45**ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಸಿಂಡೆನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಹೆಂಡತಿ. ದಿಃ11.08.2017 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಗದ್ದೆಯ ಬಳಿ ನಾನು ಹಾಗೂ ಚಾಸಾ-1 ರವರು ನಮಗೆ ಸೇರಿದ ಜಮೀನಿನಲ್ಲಿ ಜೋಳ ಕಡೆಯುತ್ತಿದ್ದೆ. ನನ್ನ ಹಾಗೂ 1ನೇ ಆರೋಪಿಗೆ ಸೇರಿದ ಜಮೀನನ್ನು ಚಾಸಾ-3 ಮತ್ತು 4 ರವರು ದಾಪುಗಾಲಿನಿಂದ ಅಳತೆ ಮಾಡುತ್ತಿದ್ದರು. ಆಗ ಚಾಸಾ-1 ರವರು ದಾಪುಗಾಲಿನಿಂದ ಅಳತೆ ಮಾಡಲು ಆಗುವುದಿಲ್ಲ, ಪೈಪಿನಿಂದ ಅಳತೆ ಮಾಡಿ ಎಂದು ಹೇಳಿದರು. ಆಗ 1ನೇ ಆರೋಪಿ ಚಾಸಾ-1 ರವರಿಗೆ ಬಾಯಿಗೆ ಬಂದಂತೆ ಬೈದರು. ಯಾಕೆ ಬೈಯುತ್ತಿರಾ ಎಂದು ನಾನು ಕೇಳಲು ಹೋದಾಗ 2ನೇ ಆರೋಪಿ ಖಾರದ ಪುಡಿಯನ್ನು ನನ್ನ ಕಣ್ಣಿಗೆ ಎರಚಿದರು. 1ನೇ ಆರೋಪಿ ನನ್ನ ಎದೆಯನ್ನು ಕಚ್ಚಿದರು ಹಾಗೂ ದೊಣ್ಣೆಯಿಂದ ನನ್ನ ಪೆಕ್ಕೆಗೆ ಹಾಗೂ ಮೊಣಕಾಲಿಗೆ ಹೊಡೆದಿರುತ್ತಾನೆ. 2ನೇ ಆರೋಪಿ ಎಡ ಮಟ್ಟೆಯಿಂದ ಎಡ ಪಕ್ಕೆಗೆ ಹೊಡೆದಿರುತ್ತಾರೆ. ಆಗ ಚಾಸಾ-1 ರವರು ಬಿಡಿಸಲು ಬಂದಾಗ, ಅವಳಿಗೂ ಸಹ 2ನೇ ಆರೋಪಿ ಖಾರದ ಪುಡಿ ಎರಚಿ, 2 ಎಳೆಯ ಮಾಂಗಲ್ಯ ಸರವನ್ನು ಕಿತ್ತು ಹಾಕಿದರು. ಅದರಲ್ಲಿ ಒಂದು ಎಳೆ

ಮಾತ್ರ ಸಿಕ್ಕಿರುತ್ತದೆ. ನನ್ನನ್ನು ಆರೋಪಿತರು ಗದ್ದೆಯೊಳಗೆ ಕಾಲಿನಿಂದ ತುಳಿದರು. 1ನೇ ಆರೋಪಿ ಚಾಸಾ-2 ರವರಿಗೆ ದೊಣ್ಣೆಯಿಂದ ನಡುವಿಗೆ ಹಾಗೂ ಕಾಲಿಗೆ ಹೊಡೆದು, ರವಿಕೆಯನ್ನು ಹಿಡಿದು ಹರೆದು ಹಾಕಿದರು. ಆಗ ಚಾಸಾ-3 ಮತ್ತು 4 ರವರು ಜಗಳ ಬಿಡಿಸಲು ಬಂದಾಗ, ಆರೋಪಿತರು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಹಾಗೂ ಚಾಸಾ-1 ರವರು ಹನಗೋಡು ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 4 ರಿಂದಲೇ ಆರೋಪಿತರು ನನ್ನ ಹಾಗೂ ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರ ವಕೀಲರು ಶ್ರೀ ಬಿ.ಎಸ್.ವೈ. ವಕೀಲರಿಂದಃ

ಗಲಾಟೆಯು ದಿಃ11.08.2017 ರಂದು ಆಗಿರುತ್ತದೆ. 1ನೇ ಆರೋಪಿ ನನ್ನ ಅಣ್ಣ. 2ನೇ ಆರೋಪಿ ನನ್ನ ಅತ್ತಿಗೆ. ಪ್ರಸ್ತುತ ಪ್ರಕರಣದಲ್ಲಿ ನಾನೇ ದೂರು ನೀಡಿರುತ್ತೇನೆ. ಆರೋಪಿತರ ಮೇಲೆ ಈ ಪ್ರಕರಣವಲ್ಲದೇ ಇನ್ನೊಂದು ಪ್ರಕರಣ ದಾಖಲಿಸಿರುತ್ತೇನೆ. ಇನ್ನೊಂದು ಪ್ರಕರಣದಲ್ಲಿ ಪ್ರಮೋದ ದೂರುದಾರನಾಗಿರುತ್ತಾನೆ.

ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನಮಗೆ ಸೇರಿದ ಜಮೀನು 12 ಎಕರೆ ಇದೆ. ನನಗೆ 4 ಎಕರೆ ಜಮೀನನ್ನು ಭಾಗಕ್ಕೆ ಕೊಟ್ಟಿರುತ್ತಾರೆ. 1ನೇ ಆರೋಪಿಗೆ 5 ಎಕರೆಗೆ ಜಮೀನನ್ನು ಭಾಗಕ್ಕೆ ಕೊಟ್ಟಿರುತ್ತಾರೆ. ಉಳಿದ ಜಮೀನನ್ನು ನನ್ನ ತಂದೆ ಉಳುಮೆ ಮಾಡುತ್ತಿದ್ದಾರೆ. ನೀವು ಹಾಗೂ 1ನೇ ಆರೋಪಿ ಭಾಗ ಮಾಡಿಕೊಂಡಿರುವ ಜಮೀನಿನ ಸಂಬಂಧ ಯಾವುದೇ ತಕರಾರು ಇಲ್ಲ, ಉಳುಮೆ ಮಾಡಿಕೊಂಡು ಹೋಗುತ್ತಿದ್ದೀರಿ ಎಂದರೆ ಸರಿ. ಆರೋಪಿತರು ಅಳತೆ ಮಾಡುತ್ತಿದ್ದ ಜಮೀನಿನ ಸ.ನಂ. ಗೊತ್ತಾ ಎಂದರೆ

ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಗಲಾಟೆ ನಡೆಯಿತು ಎಂದು ಹೇಳುವ ಜಮೀನು ಊರಿನಿಂದ ಅರ್ಧ ಕಿ.ಮೀ ದುೂರದಲ್ಲಿದೆ. ಗಲಾಟೆ ನಡೆಯಿತು ಎಂದು ಹೇಳುವ ಜಮೀನಿನ ಪಕ್ಕ ಚಿಕ್ಕಪ್ಪ-ದೊಡ್ಡಪ್ಪನ ಜಮೀನು ಇದೆ. ಗಲಾಟೆ ನಡೆಯಿತು ಎಂದು ಹೇಳುವ ದಿನದಂದು ನಿಮ್ಮ ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳು ಅವರಿಗೆ ಸೇರಿದ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರಾ ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ಹೇಳುತ್ತಾರೆ. ಗಲಾಟೆ ನಡೆಯಿತು ಎಂದು ಹೇಳುವ ಜಾಗದಲ್ಲಿ 5 ಜನ ಇದ್ದರು. ಅವರುಗಳೆಂದರೆ ಚಾಸಾ-1, 3, 4 ಹಾಗೂ ನಾನು. ಗಲಾಟೆ ನಡೆಯಿತು ಎಂದು ಹೇಳುವ ಜಮೀನು ಎಂತಹ ಜಮೀನು ಎಂದರೆ ಸಾಕ್ಷಿ ಗದ್ದೆ ಎಂದು ಹೇಳುತ್ತಾರೆ. ಗದ್ದೆಯಲ್ಲಿ ಯಾವ ಮರ ಗಿಡಗಳು ಇರುವುದಿಲ್ಲ ಎಂದರೆ ಸರಿ.

ಆರೋಪಿತರು ದೊಣ್ಣೆಯಿಂದ ಹೊಡೆದರು ಎಂದು ಹೇಳಿದ್ದು, ಸದರಿ ದೊಣ್ಣೆ ಯಾವ ಜಾತಿಯದ್ದು ಎಂದರೆ ಸಾಕ್ಷಿ ಹೊಂಗೆ ಮರದ್ದು ದೊಣ್ಣೆ ಹಾಗೂ ಗೊಧ ಮಟ್ಟೆ ಎಂದು ಹೇಳುತ್ತಾರೆ. ಗಲಾಟೆ ನಡೆಯಿತು ಎಂದು ಹೇಳುವ ಜಮೀನು ಗದ್ದೆಯಾಗಿರುವುದರಿಂದ ಅಲ್ಲಿ ಹೊಂಗೆ ಮರದ್ದು ದೊಣ್ಣೆ ಹಾಗೂ ಗೊಧ ಮಟ್ಟೆ ಜಾತಿಯ ಯಾವುದೇ ಮರಗಳು ಇರುವುದಿಲ್ಲ ಎಂದರೆ ಸಾಕ್ಷಿ ಗದ್ದೆಯಲ್ಲಿ ಇರುವುದಿಲ್ಲ, ತೊಟದಲ್ಲಿ ಇರುತ್ತವೆ ಎಂದು ಹೇಳುತ್ತಾರೆ.

ಗಲಾಟೆಯಾದಾಗ ಏನು ಪೆಟ್ಟಾಗಿತ್ತು ಎಂದರೆ ಉಂಗುರದ ಬೆರಳಿನ ಕೆಳಗೆ ಪೆಟ್ಟಾಗಿ ಮುರಿದಿತ್ತು ಎಂದು ಹೇಳುತ್ತಾರೆ. ಪೆಟ್ಟಾದಾಗ ರಕ್ತ ಬಂದಿತ್ತಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ರಕ್ತದ ಕಲೆ ಬಟ್ಟೆಗೆ ಆಗಿತ್ತಾ ಎಂದರೆ ಸಾಕ್ಷಿ ಬನಿಯನ್ ಗೆ ಆಗಿತ್ತು ಎಂದು ಹೇಳುತ್ತಾರೆ. ರಕ್ತವಾದ ಬನಿಯನ್ ನ್ನು ಪೊಲೀಸರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಸದರಿ ಬನಿಯನ್ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

1ನೇ ಆರೋಪಿ ಹೊಡೆದರು ಎಂದು ಹೇಳಿದ್ದು, ಇನ್ಯಾರಿಗೆ

ಇನ್ನೇನು ಪೆಟ್ಟಾಯಿತು ಎಂದರೆ ಸಾಕ್ಷಿ ಚಾಸಾ-1 ರವರಿಗೆ ಎಡಗಾಲು ಹಾಗೂ ಎಡಬುಜ ಪೆಟ್ಟಾಗಿದ್ದು, ಅವರ ರವಿಕೆ ಹಿಡಿದು ಎಳೆದಾಡಿ, ಅವರ ಮಾಂಗಲ್ಯ ಸರ ಕಿತ್ತು ಹಾಕಿದ್ದರು ಎಂದು ಹೇಳುತ್ತಾರೆ. ಮಾಂಗಲ್ಯದ ಸರ 60 ಗ್ರಾಂ ತೂಕ ಇತ್ತು. 60 ಗ್ರಾಂ ಮಾಂಗಲ್ಯದ ಸರ 1ನೇ ಆರೋಪಿ ಕಿತ್ತು ಹಾಕಿದ ಎಂದು ಪೊಲೀಸರ ಮುಂದೆ ಹೇಳಿಲ್ಲ. ರವಿಕೆಯನ್ನು ನಿವೇ ಹರಿದು, 1ನೇ ಆರೋಪಿ ಹರಿದ ಎಂದು ಸುಳ್ಳಾಗಿ ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಹೊಡೆದರು ಎಂದು ಸುಳ್ಳಾಗಿ ಹೇಳುತ್ತಿದ್ದು, ಮು.ಮಾ-1 ರಿಂದ 4 ನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಮೇಲೆ ಕೊಲೆ ಪ್ರಕರಣ ಇದ್ದು, ಅದರಲ್ಲಿ ಶಿಕ್ಷೆಯೂ ಸಹ ಆಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನೀವು 6 ತಿಂಗಳಿಗಿಂತ ಹೆಚ್ಚಿನ ದಿನ ಸೆರೆಮನೆ ವಾಸ ಮಾಡಿರುತ್ತೀರಿ ಎಂದರೆ ಸರಿ. ನೀವು ಸೆರೆಮನೆಯಿಂದ ವಾಪಸ್ಸು ಬಂದ ನಂತರ ಅಪರಾಧಿಕ ಮನೋಭಾವ ಹೆಚ್ಚು ಮಾಡಿಕೊಂಡು, ನಿಮ್ಮ ಮನೆಯವರ ವಿರುದ್ಧವೇ ಪ್ರಕರಣಗಳನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಸದರಿ ಕೊಲೆ ಪ್ರಕರಣದಲ್ಲಿ ನಿಮ್ಮ ತಂದೆ ಹಾಗೂ 1ನೇ ಆರೋಪಿಯೇ ನಿಮ್ಮನ್ನು ಬಿಡಿಸಲು ಹೆಚ್ಚು ಸಹಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಹಾಗೂ ಚಾಸಾ-1 ರವರನ್ನು ಹೊರತುಪಡಿಸಿ ಗಲಾಟೆಯನ್ನು ನೋಡಿದವರು ಯಾರಾದರೂ ಇದ್ದಾರಾ ಎಂದರೆ ಸಾಕ್ಷಿ ಚಾಸಾ-3 ಮತ್ತು 4 ಎಂದು ಹೇಳುತ್ತಾರೆ. ಗಲಾಟೆ ನಡೆಯಿತು ಎಂದು ಹೇಳುವ ಜಾಗದಲ್ಲಿ ಯಾರು ಇರಲಿಲ್ಲ, ಗಲಾಟೆಯೂ ಸಹ ನಡೆದಿರುವುದಿಲ್ಲ, ಪ್ರಕರಣಕ್ಕಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪೊಲೀಸರ ಮುಂದೆ ಮು.ಮಾ-4 ಯಾವ ಬಣ್ಣದ ರವಿಕೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿಲ್ಲ, ಚಾಸಾ-1 ಹೇಳಿದ್ದಾರೆ ಎಂದು ಹೇಳುತ್ತಾರೆ. ನೀವು ಹೇಳಿದಂತೆ ಯಾವುದೇ ಗಲಾಟೆಯಾಗಿರುವುದಿಲ್ಲ, ಆರೋಪಿತರಿಗೆ ತೊಂದರೆ ಕೊಡುವ

ಉದ್ದೇಶದಿಂದ ಚಾಸಾ-1 ಹಾಗೂ ನೀವು ಪಿತೂರಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ ಹಾಗೂ 1ನೇ ಆರೋಪಿಯನ್ನು ಹೆದರಿಸಿ, ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಹುಣಸೂರು.**